UNIVERSITY LIBRARY
Newspaper's Agri Clippings
05-10-2026
Monday
For more information visit University Library Website
Web - uasbagrilibindia.org
E-mail- librarian@uasbangalore.edu.in



ವಿಜಯವಾಣಿ
ಕನ್ನಡಿಗರ ಧ್ವನಿ
ನಂ. 1 ಕನ್ನಡ ದಿನಪತ್ರಿಕೆ

ಈ ಬಾರಿಯ ಕೃಷಿ ಮೇಳ ಒಂದೇ ದಿನಕ್ಕೆ ಸೀಮಿತ

ಬೆಂಗಳೂರು: ರಾಜ್ಯದಲ್ಲಿ ಬರ ಹಿನ್ನೆಲೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ತನ್ನ ಕ್ಯಾಂಪಸ್ ಜಿಕೆವಿಕೆಯಲ್ಲಿ ಪ್ರತಿವರ್ಷ ಆಯೋಜಿಸುತ್ತಿದ್ದ ಕೃಷಿ ಮೇಳವನ್ನು ಈ ಬಾರಿ ಒಂದು ದಿನಕ್ಕೆ (ನ.13) ಮಾತ್ರ ಸೀಮಿತಗೊಳಿಸಿದೆ.

■ ನ. 13ರಂದು ಆಯೋಜನೆ

ಕೃಷಿ ವಿವಿ ವ್ಯಾಪ್ತಿಗೆ ಸೇರುವ ಆರು ಜಿಲ್ಲೆಗಳ 36 ತಾಲೂಕುಗಳ ಪೈಕಿ 34 ಅನ್ನು ಬರಪೀಡಿತ ತಾಲೂಕುಗಳಾಗಿ ಸರ್ಕಾರ ಘೋಷಿಸಿದೆ. ಹಾಗಾಗಿ ಕೃಷಿ ಮೇಳವನ್ನು ನಾಲ್ಕು ದಿನದ ಬದಲು ಒಂದು ದಿನವಷ್ಟೇ ನಡೆಸಲಾಗುತ್ತದೆ. ರೈತರಿಗೆ ಬರ ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು, ಬರ ನಿರೋಧಕ ತಳಿ ಹಾಗೂ ಇನ್ನಿತರ ಬೇಸಾಯ ಪದ್ಧತಿಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ವಿವಿಯ ಕೃಷಿ ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ. ರಘುಪ್ರಸಾದ್ ಹೇಳಿದ್ದಾರೆ. ವಿವಿ ವ್ಯಾಪ್ತಿಗೆ ಒಳಪಡುವ ಆರು ಜಿಲ್ಲೆಗಳ ಸಾಧಕ ಕೃಷಿಕರಿಗೆ 2026ನೇ ಸಾಲಿನ ವಾರ್ಷಿಕ ಕೃಷಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

Bengaluru Edition
Oct 05, 2026 Page No. 9
Powered by: erelego.com

Vijayavani 05.10.2026 Pg.09

ಸಂಯುಕ್ತ ಕರ್ನಾಟಕ

ನ.13ಕ್ಕೆ ಕೃಷಿ ಮೇಳ

ಬೆಂಗಳೂರು: ಕರ್ನಾಟಕ ರಾಜ್ಯವು ಮಳೆ ಕೊರತೆಯಿಂದ ತೀವ್ರ ಬರ ಪರಿಸ್ಥಿತಿ ಎದುರಿಸುತ್ತಿದ್ದ ಹಿನ್ನೆಲೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ವಾರ್ಷಿಕ ಕೃಷಿಮೇಳ 4 ದಿನ ಬದಲಾಗಿ ಒಂದು ದಿನ ನಿಗದಿಪಡಿಸಿ, ಬರ ನಿರ್ವಹಣೆ ವಿಶೇಷ ಕಾರ್ಯಗಾರ ನಡೆಸಲಿದೆ ಎಂದು ಕೃಷಿ ವಿಸ್ತರಣಾ ನಿರ್ದೇಶಕರಾದ ಡಾ.ಕೆ.ಪಿ. ರಘುಪ್ರಸಾದ್ ತಿಳಿಸಿದರು. ಕರ್ನಾಟಕ ರಾಜ್ಯದಲ್ಲಿ ಪ್ರಸ್ತೂತ ತೀವ್ರ ಮಳೆಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಆರು ಜಿಲ್ಲೆಗಳ ಒಟ್ಟು 36 ತಾಲೂಕಗಳ ಪೈಕಿ 34 ತಾಲೂಕಗಳು ಬರಪೀಡಿತ ತಾಲ್ಲೂಕು ಎಂದು ಸರ್ಕಾರ ಘೋಷಿಸಿದೆ.

ಈ ಹಿನ್ನೆಲೆಯಲ್ಲಿ ನವೆಂಬರ ತಿಂಗಳಲ್ಲಿ ನಡೆಯುವ ವಾರ್ಷಿಕ ಕೃಷಿಮೇಳವು 4 ದಿನದ ಬದಲಾಗಿ ನ.13ರಂದು ಒಂದು ದಿನ ಸರಳವಾಗಿ ಆಚರಿಸಲು ನಿರ್ಧರಿಸಲಾಗಿದೆ. ಈ ಸಂಕಷ್ಟದ ಮಧ್ಯೆಯೂ ಸಾಧನೆಗೃದ ವಿಶ್ವವಿದ್ಯಾನಿಲಯ ವ್ಯಾಪ್ತಿಯ 6 ಜಿಲ್ಲೆಗಳ ಪ್ರಗತಿಪರ ಕೃಷಿಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮತ್ತು ರೈತರಿಗೆ ಬರ ಪರಿಸ್ಥಿತಿ ಎದುರಿಸಲು ಪುರಕ ತಂತ್ರಜ್ಞಾನಗಳು, ಬರ ನಿರೋಧಕ ತಳಿಗಳು, ಪರ್ಯಾಯ ಬೆಳೆ ಯೊಜನೆಗಳು ಮತ್ತು ಸಿರಿಧಾನ್ಯ ಕೃಷಿಯ ಪ್ರಾಮುಖ್ಯತೆಯ ಕುರಿತು ತಜ್ಞರಿಂದ ಬರ ನಿರ್ವಹಣೆ ಕಾರ್ಯಗಾರ ನಡೆಯಲಿದೆ.ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಕೃಷಿ ಸಚಿವರು ಹಾಗೂ ಇತರೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

Bangalore Edition
Oct 04, 2026 Page No. 02
Powered by: erelego.com

Samyuktha Karnataka Pg.04
04.10.2026

ಈ ಸಂಜೆ

ಈ ಬಾರಿ ಕೃಷಿಮೇಳ ಒಂದು ದಿನಕ್ಕೆ ಸೀಮಿತ

ಬೆಂಗಳೂರು,ಅ.3- ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಪ್ರತಿವರ್ಷ ನವೆಂಬರ್‌ನಲ್ಲಿ ಆಯೋಜಿಸಲಾಗುವ ನಾಲ್ಕು ದಿನಗಳ ವಾರ್ಷಿಕ ಕೃಷಿ ಮೇಳವನ್ನು ಈ ಬಾರಿ ಒಂದೇ ದಿನಕ್ಕೆ ಸೀಮಿತಗೊಳಿಸಿ ನ.13ರಂದು ಆಯೋಜಿಸಲು ತೀರ್ಮಾನಿಸಲಾಗಿದೆ.

ರಾಜ್ಯದಲ್ಲಿ ತೀವ್ರ ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಆರು ಜಿಲ್ಲೆಗಳ ಒಟ್ಟು 36 ತಾಲ್ಲೂಕುಗಳ ಪೈಕಿ 34 ತಾಲ್ಲೂಕುಗಳನ್ನು ರಾಜ್ಯ ಸರ್ಕಾರ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿದೆ. ಕೆಲವು ಪ್ರದೇಶಗಳಲ್ಲಿ ಬಿತ್ತನೆ ಕಾರ್ಯಕ್ಕೂ ಹಿನ್ನಡೆಯಾಗಿದ್ದು, ಬಿತ್ತನೆ ಪೂರ್ಣಗೊಂಡಿರುವ ಕಡೆಗಳಲ್ಲಿಯೂ ಮಳೆಯ ಕೊರತೆಯಿಂದ ಮಣ್ಣಿನಲ್ಲಿನ ತೇವಾಂಶ ಕಡಿಮೆಯಾಗಿ ಬೆಳೆಗಳ ಬೆಳವಣಿಗೆ ಕುಂಠಿತಗೊಂಡಿದೆ.

ರೈತರಿಗೆ ನೆರವಾಗುವ ಉದ್ದೇಶದಿಂದ ಆಯೋಜಿಸಲಾಗುತ್ತಿರುವ ಒಂದು ದಿನದ ಕೃಷಿ ಮೇಳದಲ್ಲಿ ಪ್ರಸ್ತುತ ಕ್ಷೇತ್ರಮಟ್ಟದಲ್ಲಿ ಲಭ್ಯವಿರುವ ನೂತನ ತಳಿಗಳನ್ನು ಪರಿಚಯಿಸಲಾಗುವುದು. ಸಂಕಷ್ಟದ ನಡುವೆಯೂ ಸಾಧನೆ ಮಾಡಿರುವ ವಿಶ್ವವಿದ್ಯಾಲಯದ ವ್ಯಾಪ್ತಿಯ ಆರು ಜಿಲ್ಲೆಗಳ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನೂ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ವಿವಿ ಪ್ರಕಟಣೆ ತಿಳಿಸಿದೆ.

ಇದೇ ಸಂದರ್ಭದಲ್ಲಿ ರಾಜ್ಯದ ರೈತರಿಗೆ ಬರ ಪರಿಸ್ಥಿತಿಯನ್ನು ಎದುರಿಸಲು ಪೂರಕ ತಂತ್ರಜ್ಞಾನಗಳು, ಬರ ನಿರೋಧಕ ತಳಿಗಳು, ಪರ್ಯಾಯ ಬೆಳೆ ಯೋಜನೆಗಳು ಹಾಗೂ ಬರ ಪರಿಸ್ಥಿತಿಯಲ್ಲಿ ಸಿರಿಧಾನ್ಯ ಕೃಷಿಯ ಮಹತ್ವ ಸೇರಿದಂತೆ ವಿವಿಧ ವಿಷಯಗಳ ಕುರಿತು ತಜ್ಞರಿಂದ ವಿಶೇಷ ಕಾರ್ಯಗಾರ ನಡೆಯಲಿದೆ. ಕಾರ್ಯಕ್ರಮದಲ್ಲಿ ಕೃಷಿ ಸಚಿವರು ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದೆ.

Bengaluru Edition
Oct 03, 2026 Page No. 8
Powered by: erelego.com

e-Sanje 03.10.2026 Pg.05